ಮಾರಾಟದ ಕೇಂದ್ರದಲ್ಲಿ ಎಲ್ಲಾ ಬಣ್ಣದ ಹೂಗಳು ಮಾರಾಟಕ್ಕೆ ಸಿಕ್ಕುತ್ತವೆ. ಗಾಬರಿ ಮೂಡಿಸುವ ವಿಶೇಷ ಸಂಗತಿ ಏನು ಗೊತ್ತೆ? ನಮ್ಮಲ್ಲಿ ಕಾನೂನು ಬಾಹಿರವಾದ, ಬೆಳೆಯಬಾರದೆಂದ ನಿಯಮವಿರುವ ಗಾಂಜಾ (cannabis) ಇಲ್ಲಿ ಪ್ರತಿ ಅಂಗಡಿಯಲ್ಲಿಯೂ ಗಿಡವಾಗಿ, ಲಾಲಿಪಾಪ್ ಆಗಿ, ಪೇಯವಾಗಿ, ಚಾಕಲೇಟ್ ಆಗಿ ಸಿಕ್ಕುತ್ತದೆ! ಗಾಂಜಾದ ಉಚಿತ ಸ್ಯಾಂಪಲ್ ಸಿಕ್ಕುತ್ತದೆ! ರೇಲ್ವೆ ನಿಲ್ದಾಣಗಳಲ್ಲಿ, ಬಸ್ ನಿಲ್ದಾಣಗಳಲ್ಲಿ ತಮ್ಮ ಪಾಡಿಗೆ ತಾವೇ ಮಾತನಾಡುವ, ವಿಚಿತ್ರವಾಗಿ ಕಾಣುವ ಕೆಲ ಜನರನ್ನು ನೋಡಿ, ಓ ಇಲ್ಲಿ ಮಾನಸಿಕ ಆರೋಗ್ಯಸೇವೆ ಅಷ್ಟು ಚೆನ್ನಾಗಿಲ್ಲ ಎಂದುಕೊಂಡಿದ್ದೆ. ಆದರೆ ಅದು ಇಲ್ಲಿ 'ಗಾಂಜಾ' ಮುಕ್ತವಾಗಿ ಸಿಗುವ ಪ್ರಭಾವ ಎಂಬುದು ಹೂಗಳ ಮಧ್ಯೆ ಜ್ಞಾನೋದಯವಾಯಿತು! ಆಮ್‌ಸ್ಟರ್‌ಡ್ಯಾಂನಲ್ಲಿ ಗಾಂಜಾದಂತಹ ಹಲವು ಮಾದಕ ದ್ರವ್ಯಗಳಿಗೆ ಮುಕ್ತ ಅವಕಾಶ. ಆದರೆ 'ಇದು ಬಹುಜನ ಒಪ್ಪದ ಸಂಗತಿ, ಯುವಜನರಲ್ಲಿ ಮಾದಕದ್ರವ್ಯ ವ್ಯಸನ ಹೆಚ್ಚುತ್ತಿರುವುದು ಆತಂಕಕಾರಿಯಾಗಿದೆ' ಎಂದು ನಮ್ಮ ಗೈಡ್ ಹೇಳಿದ.

ಸುಮಾರು 100 ಮ್ಯೂಸಿಯಂಗಳು ಆಮ್‌ಸ್ಟರ್‌ಡ್ಯಾಂ ಒಂದರಲ್ಲೇ ಇದೆ. ಬಿಯರ್ ಹೇಗೆ ಮಾಡುತ್ತಾರೆ ಎಂಬುದನ್ನು ತೋರಿಸುವ 'ಹೆನಿಕಿನ್' ಮ್ಯೂಸಿಯಂ (ಕೊನೆಯಲ್ಲಿ ಒಂದು ಬಿಯರ್ ಉಚಿತ!), ಮೇಡಂ ಟ್ಯುಸ್ಸಾಡ್‌ಳ ಮೇಣದ ಪ್ರತಿಮೆಗಳ ಮ್ಯೂಸಿಯಂ, ನೆದರ್‌ಲ್ಯಾಂಡ್‌ನ ಇತಿಹಾಸ ವಿವರಿಸುವ ರಿಜ್ಕ್ಸ್‌ಮ್ಯೂಸಿಯಂ, ಜಗತ್ತಿನ ಏಕೈಕ ಬ್ಯಾಗ್–ಪರ್ಸ್‌ಗಳ ಮ್ಯೂಸಿಯಂ, ವ್ಯಾನ್‌ಗೋಗ್ ಮ್ಯೂಸಿಯಂ, ವಜ್ರದ ಆಭರಣಗಳ ಮ್ಯೂಸಿಯಂ ..ಎಲ್ಲಿ ತಿರುಗಿದರೆ ಅಲ್ಲಿ ಮ್ಯೂಸಿಯಂ! ಇವುಗಳಲ್ಲಿ ಕೆಲವಾದರೂ ಉಚಿತವಾಗಿ ನೋಡುವ ಮ್ಯೂಸಿಯಂಗಳೂ ಕಾಣಸುತ್ತವೆ. ಕೆಲವು ಬಹುಮುಖ್ಯ ನೋಡಲೇಬೇಕಾದ್ದು ಎನ್ನುವ ಸಂಗ್ರಹಾಲಯಗಳಿಗೆ ನಮಗೆ ಹೆಚ್ಚು ಎನಿಸುವಷ್ಟೇ 'ಯೂರೋ' ತೆತ್ತು ಹೋಗಲೇಬೇಕು.

'ಆನ್ನೆ ಫ್ರಾಂಕ್' ಎಂಬ ಹುಡುಗಿಯ ಡೈರಿಯನ್ನು ಬಹಳಷ್ಟು ಜನ ಓದಿರುತ್ತಾರೆ. ಜರ್ಮನಿಯಿಂದ ನಾಝೀಗಳ ಗಲಾಟೆಯ ಸಮಯದಲ್ಲಿ ವಲಸೆ ಬಂದು ಆನ್ನೆ ಫ್ರಾಂಕ್ ಕುಟುಂಬ ಆಮ್‌ಸ್ಟರ್‌ಡ್ಯಾಂನ ನೆಲಮಾಳಿಗೆಯೊಂದರಲ್ಲಿ ಅಡಗಿತ್ತು. ಆಮೇಲೆ ಆ ಬಾಲಕಿಯನ್ನೂ 'ಕಾನ್ಸನ್‌ಟ್ರೇಷನ್ ಕ್ಯಾಂಪ್'ಗೆ ಕಳುಹಿಸಲಾಗಿತ್ತು. ಅಲ್ಲಿಯೇ ಆಕೆ ಮರಣಹೊಂದಿದಳು. ಆದರೆ ನಂತರ ಸಿಕ್ಕ ಆಕೆಯ ಡೈರಿಯನ್ನು ಅವಳ ತಂದೆ ಪ್ರಕಟಿಸಿ, ಪ್ರಚುರಪಡಿಸಿದ. ಅದೊಂದು ಮಹತ್ವದ, ಐತಿಹಾಸಿಕವಾದ ಲಿಖಿತ ದಾಖಲೆಯಾಗಿ, ಹಲವು ಭಾಷೆಗಳಿಗೆ ಭಾಷಾಂತರಗೊಂಡಿದೆ. ಆನ್ನೆ ಫ್ರಾಂಕ್ ಇದ್ದ ಮನೆ ಒಂದು ಪ್ರವಾಸಿ ತಾಣವಾಗಿದೆ. ಆಕೆಯ ವಸ್ತುಗಳ ಸಂಗ್ರಹಾಲಯವೂ ಇಲ್ಲಿದೆ. ಇದನ್ನು ನೋಡಲು ನೀವು 'ಆನ್‌ಲೈನ್ ಟಿಕೆಟ್' ಮಾತ್ರ ಖರೀದಿಸಬಹುದು. ಅದೂ ಕೆಲವು ವಾರಗಳ ಮುಂಚಿತವಾಗಿ. ನಿರ್ದಿಷ್ಟ ಸಮಯಕ್ಕೆ ಹೋದರೆ ಮಾತ್ರ ಅವಕಾಶ.

'ಆಮ್‌ಸ್ಟರ್‌ಡ್ಯಾಂ'ನಲ್ಲಿ ಮ್ಯೂಸಿಯಂಗಳಿದ್ದಂತೆಯೇ ದೊಡ್ಡ ದೊಡ್ಡ ಪಾರ್ಕ್‌ಗಳೂ ಇವೆ. 'ವೊಂಡೆಲ್‌ಪಾರ್ಕ್' ಎಂಬ ಉದ್ಯಾನದಲ್ಲಿ ಮಕ್ಕಳಿಗೆ, ವಾಕಿಂಗ್ ಮಾಡುವವರಿಗೆ ಸಂತಸವಾಗುವಂತೆ ದೊಡ್ಡ ಕೊಳ, ಬಾತುಕೋಳಿಗಳು, ಪಾರಿವಾಳಗಳು ಹೀಗೆ ಹಸಿರಿನ ಮಧ್ಯೆ ಆಟವಾಡಬಹುದು, ಸುಮ್ಮನೇ ಕುಳಿತುಕೊಳ್ಳುವುದು, ಮಲಗುವುದು ಏನೂ ಮಾಡಬಹುದು!

'ಡ್ಯಾಂಸ್ಕ್ವೇರ್'ಗೆ ಕಾಲಿಟ್ಟರೆ ಅಲ್ಲಿನ ದೊಡ್ಡ ಚೌಕದಲ್ಲಿ ಹಲವು ಚಟುವಟಿಕೆಗಳ ಜೊತೆಗೆ ಡಚ್ ಅರಮನೆ ಮನಸೆಳೆಯುತ್ತದೆ. ಅರಮನೆಯಲ್ಲಿರುವ ಕಲ್ಲಿನ ಮೇಲೆ ಕೆತ್ತಿರುವ ಜಗತ್ತಿನ ದೊಡ್ಡ ಭೂಪಟದಲ್ಲಿ 'ಆಮ್‌ಸ್ಟರ್‌ಡ್ಯಾಂ' ಜಗತ್ತಿನ ಕೇಂದ್ರದ ರೂಪದಲ್ಲಿದೆ. ರಾಜ–ರಾಣಿಯರ ಪಟ್ಟಾಭಿಷೇಕದ ವೀಡಿಯೋ ದೊಡ್ಡ ಪರದೆಯ ಮೇಲೆ ಆಗಾಗ್ಗೆ ಬರುತ್ತಲೇ ಇತ್ತು.

ಅಲ್ಲಿದ್ದ ಎಂಟು ದಿನಗಳಲ್ಲಿ 'ಆಮ್‌ಸ್ಟರ್‌ಡ್ಯಾಂ' ಟ್ರ್ಯಾಂ, ವೊಫೆಲ್ ಎಂಬ ಬೇಕರಿ ತಿಂಡಿ, ಚೀಸ್ ಎಲ್ಲವನ್ನೂ ಅಭ್ಯಾಸ ಮಾಡಿಕೊಂಡಾಗಿತ್ತು. ಜೊತೆಗೇ 'ಗುಡ್‌ಮಾರ್ನಿಂಗ್' ಹೇಳಿಯೇ 'ದಾರಿ ಹೇಗೆ'? ಎಂದು ಕೇಳುವ ಸೌಜನ್ಯವನ್ನೂ 'ಡಚ್ಚ'ರು ಕಲಿಸಿದ್ದರು! **You are Amsterdam, we are India** (ನೀವು ಆಮ್‌ಸ್ಟರ್ ಡ್ಯಾಂ, ನಾವು ಇಂಡಿಯಾ) ಎಂದು ಹಾಡುತ್ತಾ ವಾಪಸ್ಸಾದೆವು.

